ನಾಗರಾಜ ವಸ್ತಾರೆ

ಕಲೆ: ಮುರಳೀಧರ ರಾಠೋಡ್

# ಸೋಂಕು

## ಶೇಷಾನುಬಂಧ/ ಕೇಸರೀಮಾಸ್ಕು/ ನರೆತ ಮುಡಿಗಡ್ಡ/ ಆಡಿದ್ದೇ ಆಟ

ಇವಳನ್ನು ಹೀಗೆ ಸಂಧಿಸುವೆನೆಂದು ಎಂದೂ ಅಂದುಕೊಂಡಿರಲಿಲ್ಲ. ಅಸಲಿನಲ್ಲಿ, ಹೀಗೊಂದು ಭೇಟಿ ಸಾಧ್ಯವಂತೆಂಬ ಕಿಂಚಿತ್ತು ಊಹೆಯೂ ನನಗಿರಲಿಲ್ಲ. ಅಕಸ್ಮಾತ್ ಎದುರುಬದುರಾಗಿ ನೋಡಸಿಕ್ಕಲ್ಲಿ, ನಮ್ಮ ನಡುವೆ, ಮಾತು ಹುಟ್ಟೀತೆಂಬ ಉಮೇದೂ ಒಡನಿರಲಿಲ್ಲ. ತೀರಾ ಗೊಡ್ಡುಗೊಡ್ಡಾದ ಪ್ರೇಮಕತೆಯುಳ್ಳ ಸಿನೆಮಾದೊಳಗಿನ ಹಾಗೆ, ನಾಯಕ–ನಾಯಿಕೆಯರ ಮಿಲನವಿಲ್ಲದೆ ಕತೆಯೇ ಮುಗಿಯದೆನ್ನುವ ಹಾಗೆ, ಅಥವಾ, ಇಷ್ಟು ಅನೂಹ್ಯವಾಗಿ ಸಿಕ್ಕಿದ್ದೂನೂ 'ಊಹ್ಯ' ಕ್ಲೀಷೆಯೆನಿಸುವ ಹಾಗೆ – ಈ ಹೆಣ್ಣು, ಇವೊತ್ತು ಇದ್ದಕ್ಕಿದ್ದಂತೆ ಒದಗಿಬಂದಳು. ಋಣತೀರಿದರೂ ಅಷ್ಟಿಷ್ಟು ಅನುಬಂಧದ ಶೇಷ ಮಿಕ್ಕಿದೆಯೆಂಬಂತೆ ಎದುರಾಗಿ ತೋರಿದಳು.

ಇಷ್ಟಾಗಿ, ಈ ಇಡೀ ಪ್ರಕರಣವು ಸಿನೆಮಾವೊಂದರ ಪಟಕತೆಗೆ ಹೇಳಿಮಾಡಿಸಿದಂತಿರಲಿಲ್ಲ. ಸದ್ಯ... ಅಷ್ಟುಮಟ್ಟಿಗೆ ಅನೂಹ್ಯವಾಗಿಯೇ ಇತ್ತು. ಅಥವಾ, ತಕ್ಕಮಟ್ಟಿಗೆ ಅಕಸ್ಮಾತ್ ಅನ್ನಿಸಿಯೇ ಜರುಗಿತು.

ಚಾರಿ ಅಂತೊಬ್ಬ ನನ್ನ ಹಳೆಯ ಕ್ಲಯಂಟಿದ್ದಾನೆ – ಇವೊತ್ತು ಅವನು, ತಾನು ಸಿಕ್ಕಷ್ಟೇ ಅಚಾನಕ್ಕಾಗಿ, ಹೀಗೊಂದು ಮಾತನ್ನು ಹೇಳಿ ನನ್ನನ್ನು ಇನ್ನಿರದ ಪೇಚಿಗೀಡುಮಾಡಿಬಿಟ್ಟ. 'ಈಗ ತಾನೇ ನಿನ್ನ ವೈಫ್ ಸಿಕ್ಕಿದ್ದರು. ಆದರೆ, ಆಕೆ ನನ್ನನ್ನ ಗುರುತಿಸಲಿಲ್ಲ...' ಎಂದು, ಹತ್ತಾರು ಮಿನಿಟುಗಳ ನಮ್ಮ ಮಾತುಕತೆಯು – ಇನ್ನೇನು ಮುಗಿದು, ಪರಸ್ಪರ ಬೀಳ್ಕೊಂಡೇವೆನ್ನುವ ಹಂತದಲ್ಲಿ ಅವನು ಹೇಳಿ ನಸುನಕ್ಕನಷ್ಟೆ, ಯಾಕೋ ಕಾಣೆ, ನಾನು ಮೈಯುದ್ದ ಮನಸುದ್ದ ತಲ್ಲಣಿಸಿಬಿಟ್ಟೆ. ಸಾಕ್ಷಾತ್ ಈ ಕೋವಿಡ್ಡೇ ನನ್ನ ಮುಸುಡಿಯ ಮಾಸ್ಕುಭೇದಿಸಿ ಒಳಹೊಕ್ಕಿತೆಂಬಷ್ಟು ಆಘಾತಕ್ಕೀಡಾದೆ.

ಅಸಲಿನಲ್ಲಿ, ಸಮಸ್ಯೆಯಿದ್ದಿದ್ದು ಚಾರಿ ಹೇಳಿದ್ದರಲ್ಲಲ್ಲ. ಅವನು ಕುರಿತಾಡಿದ ನನ್ನೊಬ್ಬ ಹೆಂಡತಿಯ ಸಂಗತಿಯಲ್ಲಿ.

ಇರಲಿ. ಹೀಗೆ, ಏಕ್‌ದಮ್ ಮರ್ಮಘಾತುಕವನ್ನಿಸಿ ತೋರಿದ ಆ ವಿಷಯವಾದರೂ ಏನೆಂದು ಮೊಟುಕಾಗಿ ಹೇಳಿಬಿಡುತ್ತೇನೆ. ಈ ಚಾರಿ ನನ್ನೊಬ್ಬ ಹಳೆಯ ಕ್ಲಯಂಟೆಂದನಲ್ಲ, ಎಷ್ಟು ಹಳಬನೆಂದರೆ – ಅವನು ತಾನೇ ತಾನಾಗಿ ಬಂದು ಮಾತನಾಡಿಸುವ ವರೆಗೂ ಅವನಾರೆಂದು ನನಗೆ ಗೊತ್ತಾಗಲೇ ಇಲ್ಲ. ಅಂದರೆ, ಮರೆತೇಹೋಗುವಷ್ಟು ಹಳಬನಾಗಿದ್ದ. ಸಾಲದ್ದಕ್ಕೆ, ಆಸ್ಪತ್ರೆಯ